ಒಂದು ಊರಲ್ಲಿ ಓರ್ವ ಯುವಕನಿದ್ದ. ಬದುಕಿಗೆ ಬೇರೆ ದಾರಿ ಕಾಣದೆ ಆತ ಭಿಕ್ಷೆ ಬೇಡಿ ಜೀವಿಸುತ್ತಿದ್ದ. ಒಮ್ಮೆ ಆ ಊರಿಗೆ ರಾಜಭಟರು ಬಂದು ಡಂಗುರ ಸಾರಿದರು– 'ಯುವ ಜನರೇ ಕೇಳಿ, ನಿಮಗೊಂದು ಅಪೂರ್ವ ಅವಕಾಶ. ನಮ್ಮ ಮಹಾರಾಜರಿಗೆ ಗಂಡು ಮಕ್ಕಳಿಲ್ಲದ ಕಾರಣ ತಮ್ಮ ಉತ್ತರಾಧಿಕಾರಿಯನ್ನು ಆರಿಸಲು ಅವರು ಯೋಗ್ಯ ಯುವಕನನ್ನು ಹುಡುಕುತ್ತಿದ್ದಾರೆ. ಆ ಯುವಕನಿಗೆ ಇರಬೇಕಾದ ಏಕಮಾತ್ರ ಅರ್ಹತೆ ಎಂದರೆ ಆತನಲ್ಲಿ ಮಾನವೀಯ ಗುಣವಿರಬೇಕು. ಅಂಥವರು ನಾಳೆಯೇ ಮಹಾರಾಜರನ್ನು ಭೇಟಿ ಆಗಬೇಕು.'

ಯುವ ಭಿಕ್ಷುಕ ಯೋಚಿಸಿದ: ತಾನೂ ಯಾಕೆ ಒಮ್ಮೆ ಮಹಾರಾಜರನ್ನು ಕಾಣಬಾರದು? ಆದರೆ ಅವರ ಎದುರು ಹೋಗಿ ನಿಲ್ಲಬೇಕಾದರೆ ತನಗೆ ಕನಿಷ್ಠ ಒಳ್ಳೆಯ ಬಟ್ಟೆಯಾದರೂ ಬೇಕು. ಹೋಗಿ ಬರುವಷ್ಟು ಹಣವೂ ಬೇಕು. ಅದಕ್ಕೇನು ಮಾಡುವುದು ಎಂದು ಚಿಂತೆಯಾಯಿತು.

ಕೂಡಲೇ ಅವನಿಗೊಂದು ವಿಚಾರ ಹೊಳೆಯಿತು. ಒಂದು ರಟ್ಟಿನ ಮೇಲೆ 'ನಾನು ನಾಳೆ ಮಹಾರಾಜರನ್ನು ಕಾಣಲು ಹೋಗಬೇಕು. ಆದರೆ ನನ್ನ ಬಳಿ ಒಳ್ಳೆಯ ಬಟ್ಟೆ ಇಲ್ಲ. ಹೋಗಿ ಬರುವಷ್ಟು ಹಣವೂ ಇಲ್ಲ. ಇದು ನಮ್ಮೂರಿನ ಮಾನದ ಪ್ರಶ್ನೆ. ನೀವು ಸಹಾಯ ಮಾಡಿದರೆ ನಾನು ನನ್ನ ಅದೃಷ್ಟ ಪರೀಕ್ಷಿಸಿಕೊಳ್ಳಬಹುದು. ನಿಮ್ಮ ಋಣವನ್ನು ನಾನೆಂದೂ ಮರೆಯಲಾರೆ' ಎಂದು ಬರೆದುಕೊಂಡು ಊರು ಸುತ್ತಿದ. ಅದನ್ನೋದಿ ಒಬ್ಬರು ಸೂಟು, ಒಬ್ಬರು ಕೋಟು, ಹ್ಯಾಟು, ಮತ್ತೊಬ್ಬರು ಬೂಟು ಕೊಟ್ಟರು. ಕೆಲವರು ತಮಗಾದಷ್ಟು ಪುಡಿಗಾಸು ನೀಡಿದರು.

ಯುವಕ ಆ ಸೂಟು, ಕೋಟು, ಹ್ಯಾಟು, ಬೂಟು ಹಾಕಿಕೊಂಡು ತಯಾರಾಗಿ, ಸಂಗ್ರಹವಾದ ಹಣವನ್ನು ಇಟ್ಟುಕೊಂಡು ಮಹಾರಾಜರನ್ನು ಭೇಟಿಯಾಗಲು ಹೊರಟ. ಮುಸ್ಸಂಜೆಯ ಸಮಯ. ಅರಮನೆ ಇನ್ನು ಸ್ವಲ್ಪವೇ ದೂರವಿತ್ತು. ದಾರಿಯಲ್ಲಿ ಓರ್ವ ಮುದಿ ಭಿಕ್ಷುಕ ನಿಂತಿದ್ದ. ಆತನ ಮೈಮೇಲೆ ಪೂರ್ತಿ ಹರಿದು ಹೋದ ಒಂದೇ ಒಂದು ತುಂಡು ಬಟ್ಟೆ ಇತ್ತು. ಆತ ಚಳಿಯಿಂದ ನಡುಗುತ್ತಿದ್ದ. 'ಒಂದು ವಾರದಿಂದ ಏನೂ ತಿಂದಿಲ್ಲ ಸ್ವಾಮಿ, ಸಹಾಯ ಮಾಡಿ' ಎಂದು ಎಲ್ಲರಲ್ಲೂ ಮೊರೆ ಇಡುತ್ತಿದ್ದ. ಕೆಲವರು ನೋಡಿಯೂ ನೋಡದಂತೆ ನಡೆದರು, ಕೆಲವರು ಒಂದಷ್ಟು ಕಾಸು ನೀಡಿದರು. ಆದರೆ ಯುವ ಭಿಕ್ಷುಕನಿಗೆ ಹಸಿವು ಎಂದರೇನು ಎಂದು ಗೊತ್ತಿತ್ತು. ಮೈಮೇಲೆ ಬಟ್ಟೆ ಇಲ್ಲದಾಗ ಚಳಿಗೆ ಹೇಗಾಗುತ್ತದೆ ಎನ್ನುವುದನ್ನೂ ಆತ ಬಲ್ಲ. ಹೀಗಾಗಿ ಅವನ ಹೆಜ್ಜೆಗಳು ಅಲ್ಲೇ ನಿಂತುಬಿಟ್ಟವು. ಆತ ತನ್ನ ಸೂಟು, ಕೋಟು, ಹ್ಯಾಟು, ಬೂಟು ಎಲ್ಲವನ್ನೂ ಅವನಿಗೆ ಬಿಚ್ಚಿಕೊಟ್ಟ. ತನ್ನಲ್ಲಿದ್ದ ಪುಡಿಗಾಸನ್ನೂ ನೀಡಿದ. ಭಿಕ್ಷುಕನ ಹರಕು ಅಂಗಿಯನ್ನು ಯುವಕ ತಾನು ತಗುಲಿಸಿಕೊಂಡು ಬಂದ ದಾರಿಗೆ ಹಿಂತಿರುಗಿದ. ಆಗ ಮುದಿ ಭಿಕ್ಷುಕ, 'ಏಯ್... ಎಲ್ಲಿಗೆ ಹೋಗುತ್ತಿದ್ದೀಯ?' ಎಂದು ಕೇಳಿದ. 'ಇನ್ನೆಲ್ಲಿಗೆ... ಬಂದ ದಾರಿಗೆ ಮರಳುವೆ. ಈ ಸ್ಥಿತಿಯಲ್ಲಿ ನಾನು ಮಹಾರಾಜರನ್ನು ಹೇಗೆ ಕಾಣುವುದು, ನನ್ನನ್ನು ಅರಮನೆಯ ಒಳಗೆ ಬಿಡುವುದಿಲ್ಲ' ಎಂದ ಯುವಕ. ಮುದಿ ಭಿಕ್ಷುಕ ಗಟ್ಟಿಯಾಗಿ ನಕ್ಕು ಚಪ್ಪಾಳೆ ತಟ್ಟಿದ. ಕೂಡಲೇ ರಸ್ತೆಯ ತುಂಬಾ ಝಗಮಗ ದೀಪಗಳು ಹೊತ್ತಿಕೊಂಡವು. ಸುತ್ತಲೂ ನೂರಾರು ಜನ ಸೇರಿದರು. ಮುದಿ ಭಿಕ್ಷುಕನಿಗೆ ನಮಸ್ಕರಿಸಿದರು. 'ಈತನೇ ಅರಮನೆಯ ಉತ್ತರಾಧಿಕಾರಿ... ನಮ್ಮ ಪರೀಕ್ಷೆಯಲ್ಲಿ ಈತ ಗೆದ್ದಿದ್ದಾನೆ. ಇವನನ್ನು ಅರಮನೆಯ ಒಳಗೆ ಕರೆದೊಯ್ದು ಮುಂದಿನ ತಯಾರಿ ಮಾಡಿ' ಎಂದು ಆದೇಶಿಸಿದ ಮಹಾರಾಜ!

(ಸಂಗ್ರಹ)